ಬಂದಾಗ ನಿರಾಕರಿಸಿದ್ದೆ. ದೊಡ್ಡ ಜನರ ಸಹವಾಸವೇ ಬೇಡವೆಂದು ಬೇಡಿಕೊಂಡಿದ್ದೆ. ಅಮ್ಮ ಸಿಟ್ಟಾಗಿದ್ದಳು. 'ದುಡ್ಡಿಗಿರುವ ಬೆಲೆ ಯಾವುದಕ್ಕಿದೆ ಹೇಳು? ಸೆಕೆಂಡ್ ಹ್ಯಾಂಡ್ ಸ್ಕೂಟರ್ ಕೊಳ್ಳಬೇಕಾದರೂ ಒದ್ದಾಡುವವರು ನಾವು. ಕಾರು, ದೊಡ್ಡ ಸ್ವಂತ ಮನೆ ಸಂಬಂಧ ಆದೃಷ್ಟವಂತರಿಗೆ ಮಾತ್ರ ಸಿಗುತ್ತದೆ ಕಣೇ.' ಅಪ್ಪ ದೈನ್ಯತೆಯಿಂದ ನೋಡಿದರು. ಅಸಹಾಯಕತೆಯನ್ನು ಅರಿತು ಸುಮ್ಮನಾದೆ. ಪ್ರಭುವಿನ ವಧುವಾದೆ.

ಮೊದಲ 7-8 ವರ್ಷ ಸುಖವಾಗಿಯೇ ಜೀವನ ಸಾಗಿತು. ಇಬ್ಬರು ಮುದ್ದು ಮಕ್ಕಳಾದರು. ಸಂಸಾರ ನೌಕೆ ತತ್ತರಿಸಲು ಎಷ್ಟು ಹೊತ್ತು ಬೇಕು? ಒಂದೆರಡು ಘಟನೆಗಳು ಸಾಕು. ಚೆನ್ನೈಗೆಂದು ಮದುವೆಗೆ ಹೋಗಿ ಬರುವಾಗ ಹೆದ್ದಾರಿಯಲ್ಲಿ ನಡೆದ ಕಾರ್ ಆಕ್ಸಿಡೆಂಟಿನಲ್ಲಿ ಅತ್ತೆ, ಮಾವ ತೀರಿಕೊಂಡರು. ತಂದೆ ತೀರಿಕೊಳ್ಳುತ್ತಿದ್ದಂತೆ ಫ್ಯಾಕ್ಟರಿಯ ಜವಾಬ್ದಾರಿ ಪ್ರಭುವಿನ ಹೆಗಲಿಗೇರಿತು. ಆಗಲೇ ಅವನ ಎಳಸು ಬುದ್ಧಿ ಗೊತ್ತಾಗಿದ್ದು. ಯಾವುದೇ ಡಿಸಿಶನ್ ತೆಗೆದುಕೊಳ್ಳಲೂ ತೊಳಲಾಡಿದ. ಏನೋ ಮಾಡಲು ಹೋಗಿ ಮತ್ತೇನೋ ಮಾಡಿದ. ಪರಿಣಾಮ ತಂದೆ ಸತ್ತ ಒಂದೆರಡು

